# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **462** |
| ಸದಸ್ಯರ ಹೆಸರು | : | ಶ್ರೀ ಮಂಜುನಾಥ ಭಂಡಾರಿ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 19-02-2024 |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಸಚಿವರು |

****

| | ಪ್ರಶ್ನೆ | ಉತ್ತರ |
|---|---|---|
| ಅ) | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಈವರೆಗೆ ಕೃಷಿ ಪಂಪ್ ಸೆಟ್ ಆಧಾರಿತ ವಿದ್ಯುತ್ ಸಂಪರ್ಕಕ್ಕಾಗಿ ಇಲಾಖೆಗೆ ಬಂದಿರುವ ಅರ್ಜಿಗಳೆಷ್ಟು; ಇಲಾಖೆಯಿಂದ ನೀಡಲಾದ ವಿದ್ಯುತ್ ಸಂಪರ್ಕಗಳೆಷ್ಟು; ಬಾಕಿಯಿರುವ ಅರ್ಜಿಗಳೆಷ್ಟು; ಬಾಕಿಯಿರಲು ಕಾರಣವೇನು; (ತಾಲ್ಲೂಕುವಾರು ಮಾಹಿತಿ ಒದಗಿಸುವುದು) | ಮಂಗಳೂರು ವಿದ್ಯುತ್ ಸರಬರಾಜು ಕಂಪನಿ ವ್ಯಾಪ್ತಿಯ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಈವರೆಗೆ ಕೃಷಿ ಪಂಪ್‌ಸೆಟ್‌ಗಳ ವಿದ್ಯುತ್ ಸಂಪರ್ಕಕ್ಕಾಗಿ ವಿವಿಧ ಯೋಜನೆಗಳಡಿ ನೋಂದಣಿಯಾದ, ವಿದ್ಯುತ್ ಸಂಪರ್ಕ ಕಲ್ಪಿಸಲಾದ ಹಾಗೂ ಬಾಕಿ ಇರುವ ಅರ್ಜಿಗಳ ತಾಲೂಕುವಾರು ವಿವರಗಳನ್ನು **ಅನುಬಂಧ-1, 2 ಮತ್ತು 3** ರಲ್ಲಿ ಒದಗಿಸಲಾಗಿದೆ. |
| ಆ) | ಉಡುಪಿ ಜಿಲ್ಲೆಯಲ್ಲಿ ಈವರೆಗೆ ಕೃಷಿ ಪಂಪ್‌ಸೆಟ್ ಆಧಾರಿತ ವಿದ್ಯುತ್ ಸಂಪರ್ಕಗಳ ಬಾಬ್ತು ಸರ್ಕಾರದಿಂದ ಎಸ್ಕಾಂಗಳಿಗೆ ಬಿಡುಗಡೆಯಾಗಿರುವ ಅನುದಾನದ ಮೊತ್ತವೆಷ್ಟು; ಬಾಕಿಯಿರುವ ಮೊತ್ತವೆಷ್ಟು; ಬಾಕಿಯಿರಲು ಕಾರಣವೇನು; (ತಾಲ್ಲೂಕುವಾರು ಮಾಹಿತಿ ಒದಗಿಸುವುದು) | ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿಗೆ ಈವರೆಗೆ ಕೃಷಿ ಪಂಪ್ ಸೆಟ್ ಆಧಾರಿತ ವಿದ್ಯುತ್ ಸಂಪರ್ಕಗಳ ಬಾಬ್ತು ಸರ್ಕಾರದಿಂದ ಬಿಡುಗಡೆಯಾದ ಅನುದಾನದ ವಿವರಗಳು ಕೆಳಕಂಡಂತಿವೆ. |

(**ರೂ. ಕೋಟಿಗಳಲ್ಲಿ**)

| **ಯೋಜನೆ** | **ವರ್ಷ** | **ಬಿಡುಗಡೆ ಯಾದ ಮೊತ್ತ** |
|---|---|---|
| ಅನಧಿಕೃತ ಐಪಿ ಸೆಟ್‌ಗಳನ್ನು ಕ್ರಮ ಬದ್ಧಗೊಳಿಸುವುದಕ್ಕಾಗಿ ಮೂಲ ಸೌಕರ್ಯ ಅಭಿವೃದ್ಧಿಗೆ ಈಕ್ವಿಟಿ | 2011-12<br>2012-13 | 12.00<br>19.00 |
| ಎಸ್.ಸಿ.ಎಸ್.ಪಿ ಯೋಜನೆಯಡಿ ಗಂಗಾ ಕಲ್ಯಾಣ ಯೋಜನೆಯಲ್ಲಿ ಕೊರೆದ ಕೊಳವೆ ಬಾವಿಗಳಿಗೆ ವಿದ್ಯುದೀಕರಣ | 2014-15<br>2015-16<br>2016-17<br>2017-18 | 5.00<br>3.75<br>10.68<br>2.56 |
| ಟಿ.ಎಸ್.ಪಿ ಯೋಜನೆಯಡಿ ಗಂಗಾ ಕಲ್ಯಾಣ ಯೋಜನೆಯಲ್ಲಿ ಕೊರೆದ ಕೊಳವೆ ಬಾವಿಗಳಿಗೆ ವಿದ್ಯುದೀಕರಣ | 2014-15<br>2015-16<br>2016-17<br>2017-18 | 2.00<br>1.20<br>3.73<br>0.65 |
| ಗಂಗಾ ಕಲ್ಯಾಣ ಯೋಜನೆಯಡಿ ಕೊರೆದ ಕೊಳವೆ ಬಾವಿಗಳಿಗ ವಿದ್ಯುದೀಕರಣಕ್ಕಾಗಿ ವಿವಿಧ ಅಭಿವೃದ್ಧಿ ನಿಗಮ ಗಳಿಂದ ಬಿಡುಗಡೆಯಾದ ವೆಚ್ಚ | 2002-03 ರಿಂದ ಜನವರಿ 2024ರ ವರೆಗೆ | 87.28 |
| **ಒಟ್ಟು** | | **147.85** |

<table>
<tr>
<td></td>
<td></td>
<td>ಜನವರಿ 2024ರ ಅಂತ್ಯಕ್ಕೆ ಗಂಗಾ ಕಲ್ಯಾಣ ಯೋಜನೆಯಡಿ ಕೊರೆದ ಕೊಳವೆ ಬಾವಿಗಳಿಗ ವಿದ್ಯುದೀಕರಣಕ್ಕಾಗಿ ವಿವಿಧ ಅಭಿವೃದ್ಧಿ ನಿಗಮ ಗಳಿಂದ ರೂ. 25.53 ಕೋಟಿಗಳಷ್ಟು ಬಿಡುಗಡೆಯಾಗಲು ಬಾಕಿಯಿರುತ್ತದೆ.<br><br>ಕೃಷಿ ಪಂಪ್ ಸೆಟ್ ಆಧಾರಿತ ವಿದ್ಯುತ್ ಸಂಪರ್ಕಗಳ ಬಾಬ್ತು ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನವನ್ನು ತಾಲ್ಲೂಕುವಾರು ಮತ್ತು ಜಿಲ್ಲಾವಾರು ಹಂಚಿಕೆ ಮಾಡಲಾಗಿರುವುದಿಲ್ಲ.</td>
</tr>
<tr>
<td>ಇ)</td>
<td>ರಾಜ್ಯದಲ್ಲಿ ಈ ಹಿಂದೆ ಇದ್ದಂತೆ ಸ್ಲಾಬ್ ಆಧಾರಿತ ವಿದ್ಯುತ್ ಬಿಲ್ಲು ನೀಡುವ ಪದ್ಧತಿಯನ್ನು ಏಕಾಏಕಿ ಕೈ ಬಿಡಲು ಕಾರಣವೇನು; ವಿದ್ಯುತ್ ಬಿಲ್ ನಲ್ಲಿ ಇಂಧನ ಹೊಂದಾಣಿಕೆ ಮೊತ್ತವನ್ನು ಹೆಚ್ಚುವರಿಯಾಗಿ ಸೇರಿಸಲು ಕಾರಣವೇನು; ಇಲಾಖೆಯ ಈ ಕ್ರಮದಿಂದ ಸಾರ್ವಜನಿಕರಿಗೆ ಹೊರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಬಗ್ಗೆ ಕೈಗೊಂಡ ಕ್ರಮವೇನು; (ದಾಖಲಾತಿಯೊಂದಿಗೆ ಸಂಪೂರ್ಣ ಮಾಹಿತಿ ನೀಡುವುದು)</td>
<td>ವಿದ್ಯುತ್ ಕಾಯ್ದೆ 2003 ರ ಸೆಕ್ಷನ್ 61 ಮತ್ತು 62 ರ ಅನ್ವಯ, ಕರ್ನಾಟಕ ರಾಜ್ಯದ ವಿದ್ಯುತ್ ಜಕಾತಿಗಳನ್ನು ನಿಗದಿಪಡಿಸುವ ಅಧಿಕಾರವು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (KERC), ಬೆಂಗಳೂರು ಇವರ ವ್ಯಾಪ್ತಿಗೆ ಒಳಪಟ್ಟಿರುತ್ತದೆ.<br><br>KERC ಹೊರಡಿಸಿದ ಜಕಾತಿ ಆದೇಶ-2023, ದಿನಾಂಕ:12.05.2023 ರ ಜಕಾತಿ ಪರಿಷ್ಕರಣೆಯಲ್ಲಿ ಗೃಹಬಳಕೆ ಜಕಾತಿಯಡಿ (Domestic tarrif) ಈ ಮೊದಲು ನಾಲ್ಕು ಸ್ಲ್ಯಾಬ್ ಗಳಿದ್ದವು. ಅದನ್ನು KERC ಯು ಎರಡು ಸ್ಲ್ಯಾಬ್ ಗಳಾಗಿ ಏಪ್ರಿಲ್-2023 ರಿಂದ ಬದಲಿಸಿತು. ವಿವರಗಳು ಈ ಕೆಳಕಂಡಂತಿವೆ.<br>
<table>
<tr><th colspan="2">ಹಳೆ ವಿದ್ಯುತ್ ಶುಲ್ಕ ದರ ಪಟ್ಟಿ</th><th colspan="2">ಹೊಸ ವಿದ್ಯುತ್ ಶುಲ್ಕ ದರ ಪಟ್ಟಿ</th></tr>
<tr><td>In Unit</td><td>In Rupees</td><td>In Unit</td><td>In Rupees</td></tr>
<tr><td>0-50 Unit</td><td>4.15</td><td>0-100 Unit</td><td>4.75</td></tr>
<tr><td>50 to 100 Unit</td><td>5.60</td><td rowspan="3">101 Unit and more</td><td rowspan="3">7.00</td></tr>
<tr><td>100 to 200 Unit</td><td>7.15</td></tr>
<tr><td>250 Unit and more</td><td>8.20</td></tr>
</table>
<br>ಆಯೋಗವು ಹೊರಡಿಸಿದ (ಇಂಧನ ವೆಚ್ಚ ಹೊಂದಾಣಿಕೆ ಶುಲ್ಕ) 2013, ದಿನಾಂಕ 21.03.2013 ಆದೇಶದನ್ವಯ 2013 ರಿಂದ ಇಂಧನ ಹೊಂದಾಣಿಕೆ ಶುಲ್ಕ (FAC) ವ್ಯವಸ್ಥೆ ಜಾರಿಯಲ್ಲಿತ್ತು. ಅಂದಿನಿಂದ ಪ್ರತಿ ಮೂರು ತಿಂಗಳಿಗೊಮ್ಮೆ ಮಾತ್ರ FAC ಪರಿಷ್ಕರಣೆಯಾಗುತ್ತಿತ್ತು. ಆದರೆ, ಅಯೋಗವು ದಿನಾಂಕ 21-10-2022 ರಲ್ಲಿ, KERC (ಇಂಧನ ಮತ್ತು ವಿದ್ಯುತ್ ಖರೀದಿ ವೆಚ್ಚ ಹೊಂದಾಣಿಕೆ ಶುಲ್ಕಗಳು) ನಿಯಮಗಳು -2022 ರಲ್ಲಿ FAC ಅನ್ನು FPPCA ಎಂದು ಬದಲಿಸಿ ಅಧಿಸೂಚನೆ ಹೊರಡಿಸಿದೆ. ನಂತರದಲ್ಲಿ 29.12.2022 ರಂದು ಕೇಂದ್ರ ವಿದ್ಯುತ್ ಸಚಿವಾಲಯ ಪರಿಚಯಿಸಿದ ಇಂಧನ ವಿದ್ಯುತ್ ಖರೀದಿ ವೆಚ್ಚದ ಹೊಂದಾಣಿಕೆಯನ್ನು, ಆಯೋಗವು 23.02.2023 ರಂದು ಅಧಿಸೂಚನೆ ಹೊರಡಿಸಿ, ಇಂಧನ ಮತ್ತು ವಿದ್ಯುತ್ ಖರೀದಿ ವೆಚ್ಚ ಹೊಂದಾಣಿಕೆ ಶುಲ್ಕವನ್ನು ಎಸ್ಕಾಂಗಳು ಪ್ರತಿ ತಿಂಗಳು ಗ್ರಾಹಕರಿಂದ ವಸೂಲಿ ಮಾಡಬೇಕು ಎಂದು ಸ್ಪಷ್ಟ ನಿರ್ದೇಶನ ನೀಡಿತು. ಇಂಧನದ ಜತೆಗೆ ವಿದ್ಯುತ್ ಪ್ರಸರಣ ಸೇರಿದಂತೆ ವಿವಿಧ ವೆಚ್ಚವನ್ನು ಸಹ ಭರಿಸಬೇಕು ಎನ್ನುವ ಸೂಚನೆ ನೀಡಲಾಗಿತ್ತು.</td>
</tr>
</table>

| | | |
|---|---|---|
| | | ಹೀಗಾಗಿ, ಇಂಧನ ಮತ್ತು ವಿದ್ಯುತ್ ಖರೀದಿ ವೆಚ್ಚ ಹೊಂದಾಣಿಕೆ ವ್ಯತ್ಯಾಸವನ್ನು ಗ್ರಾಹಕರಿಂದ FPPCA ಸಂಗ್ರಹಿಸುವ/ಕಡಿತಗೊಳಿಸುವ ಪ್ರಕ್ರಿಯೆಯನ್ನು ಎಸ್ಕಾಂಗಳು ಆರಂಭಿಸಿವೆ. ಈ ನಿಯಮಕ್ಕೆ ಬದ್ಧವಾಗಿಯೇ ರಾಜ್ಯದಲ್ಲಿನ ಎಸ್ಕಾಂಗಳು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ (KERC) ನಿರ್ದೇಶನದಂತೆ ಇಂಧನ ಮತ್ತು ವಿದ್ಯುತ್ ಖರೀದಿ ವೆಚ್ಚ ಹೊಂದಾಣಿಕೆ (FPPCA) ಶುಲ್ಕವನ್ನಾಗಿ ಪಡೆಯುತ್ತಿವೆ.<br>ವಿದ್ಯುತ್ ಸರಬರಾಜು ಕಂಪನಿಗಳು ಒಂದು ಉದ್ಯಮವಾಗಿದ್ದು, ಉದ್ಯಮವು ಭರಿಸುವ ವೆಚ್ಚವನ್ನು ವಿದ್ಯುತ್ ಬಳಕೆದಾರರು ಭರಿಸುವುದು ಸಮಂಜಸ ಹಾಗೂ ವೆಚ್ಚವನ್ನು ಗ್ರಾಹಕರಿಗೆ ವಿದ್ಯುತ್ ಸರಬರಾಜು ಮಾಡುವ ಸಲುವಾಗಿ ವಿದ್ಯುತ್ ಉತ್ಪಾದನೆ, ಸಂವಹನಾ ಹಾಗೂ ಇತರೆ ವೆಚ್ಚಗಳನ್ನು ಪಿ.ಪಿ.ಎ ಹಾಗು ಸಿಇಆರ್‌ಸಿ / ಕೆಇಆರ್‌ಸಿ ನಿಯಮಗಳನ್ವಯ ವೆಚ್ಚವನ್ನು ಭರಿಸಬೇಕಾಗಿರುತ್ತದೆ. |
| ಈ) | ಸಿಬ್ಬಂದಿ ಹಾಗೂ ಸಂಪನ್ಮೂಲಗಳ ಕೊರತೆಯಿಂದ ಎಸ್ಕಾಂಗಳ ಸೇವೆಯಲ್ಲಿ ವ್ಯತ್ಯಯ ಆಗುತ್ತಿದ್ದು, ಇದರ ಪರಿಣಾಮ ಗ್ರಾಹಕರ ಮೇಲಾಗುತ್ತಿದ್ದಲ್ಲಿ, ಸೇವೆಯನ್ನು ಉನ್ನತೀಕರಿಸಲು ಈವರೆಗೆ ಕೈಗೊಂಡ ಕಾಮಗಾರಿಗಳಿಗಾಗಿ ವೆಚ್ಚ ಮಾಡಲಾದ ಮೊತ್ತವೆಷ್ಟು; ಬಾಕಿಯಿರುವ ಕಾಮಗಾರಿಗಳಾವುವು?<br>(ಎಸ್ಕಾಂವಾರು, ತಾಲ್ಲೂಕುವಾರು, ಸಿಬ್ಬಂದಿವಾರು ಮಾಹಿತಿ ನೀಡುವುದು) | ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಹಾಲಿ ಕಾರ್ಯನಿರತ ಸಿಬ್ಬಂದಿಗಳಿಂದಲೇ ಸಮರ್ಪಕವಾಗಿ ವಿದ್ಯುತ್ ಸೇವೆಯನ್ನು ಒದಗಿಸಲಾಗುತ್ತಿದೆ ಹಾಗೂ ಗ್ರಾಹಕರ ವಿದ್ಯುತ್ ಸಮಸ್ಯೆಗಳಿಗೆ ಸ್ಪಂದಿಸಿ ವಿದ್ಯುತ್ ಅಡಚಣೆಗಳನ್ನು ಸರಿಪಡಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ. ಅದಾಗ್ಯೂ, ಅವಶ್ಯಕತೆಗೆ ಅನುಗುಣವಾಗಿ ಹೊರಗುತ್ತಿಗೆ ಆಧಾರದಲ್ಲಿ ಮಾನವ ಸಂಪನ್ಮೂಲ ಸೇವೆಗಳನ್ನು ಪಡೆದು ಸೇವೆಯಲ್ಲಿ ವ್ಯತ್ಯಯವುಂಟಾಗದಂತೆ ನೋಡಿಕೊಳ್ಳಲಾಗುತ್ತಿದೆ.<br>ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ ಮತ್ತು ಹೊರ ಗುತ್ತಿಗೆದಾರರಿಗೆ ಪಾವತಿಸಲಾಗುತ್ತಿರುವ ಮೊಬಲಗಿನ ವಿವರಗಳನ್ನು **ಅನುಬಂಧ-4**ರಲ್ಲಿ ಒದಗಿಸಲಾಗಿದೆ. |

ಸಂಖ್ಯೆ: ಎನರ್ಜಿ 47 ಇಬಿಎಸ್ 2024

(ಕೆ.ಜೆ.ಜಾರ್ಜ್) 21/2/24
ಇಂಧನ ಸಚಿವರು

[illegible]

**ಸರ್ಕಾರದ ಆದೇಶ ದಿನಾಂಕ 14.07.14 ರಿಂದ 22.09.2023ರ ವರೆಗೆ ನೋಂದಣಿಯಾದ ಅರ್ಜಿಗಳ ಪ್ರಗತಿ (ಜನವರಿ-24ರ ಅಂತ್ಯಕ್ಕೆ)**

| ಕ್ರ. ಸಂ. | ಜಿಲ್ಲೆ | ತಾಲ್ಲೂಕು | ರೂ. 50/- ನೋಂದಣಿ ಶುಲ್ಕ ಪಾವತಿಸಿದ ಒಟ್ಟು ಅರ್ಜಿಗಳು | ರೂ.10,000/- ಪಾವತಿಸಿರುವ ಒಟ್ಟು ನೀರಾವರಿ ಪಂಪುಸೆಟ್ಟುಗಳ ಸಂಖ್ಯೆ | ಮೂಲಭೂತ ಸೌಲಭ್ಯ ಕಲ್ಪಿಸಲಾದ | | | ಮೂಲಭೂತ ಸೌಲಭ್ಯ ಕಲ್ಪಿಸಬೇಕಾದ ಅರ್ಜಿಗಳ ಸಂಖ್ಯೆ | ಬಾಕಿ ಇರಲು ಕಾರಣ |
|---|---|---|---|---|---|---|---|---|---|
| | | | | | ಮೂಲಕ ವಿದ್ಯುತ್ ಸಂಪರ್ಕ ನೀಡಿರುವ ನೀರಾವರಿ ಪಂಪುಸೆಟ್ಟುಗಳ | ಮೂಲಭೂತ ಸೌಲಭ್ಯ ಕಲ್ಪಿಸಲಾದ ನೀರಾವರಿ ಪಂಪುಸೆಟ್ಟುಗಳ ಸಂಖ್ಯೆ | ಒಟ್ಟು | | |
| 1 | ದಕ್ಷಿಣ ಕನ್ನಡ | ಮಂಗಳೂರು | 1747 | 1741 | 955 | 786 | 1741 | 0 | ಮೂಲಭೂತ ಸೌಲಭ್ಯ ಕಲ್ಪಿಸಲು ಬಾಕಿ ಇರುವ ಎಲ್ಲಾ ಅರ್ಜಿಗಳು ಕಾಮಗಾರಿ ಪ್ರಗತಿಯಲ್ಲಿದೆ ಹಾಗೂ ಅರ್ಜಿಗಳ ಜೇಷ್ಠತೆಯ ಆಧಾರದ ಮೇಲೆ ಕಾಮಗಾರಿಗೆ ಅಗತ್ಯವಿರುವ ಸಾಮಗ್ರಿಗಳನ್ನು ವಿತರಿಸಿ ವಿದ್ಯುತ್ ಸಂಪರ್ಕ ಕಲ್ಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. |
| 2 | | ಉಳ್ಳಾಲ | 520 | 520 | 406 | 114 | 520 | 0 | |
| 3 | | ಮೂಡಬಿದ್ರೆ | 2597 | 2579 | 1339 | 1240 | 2579 | 0 | |
| 4 | | ಮುಲ್ಕಿ | 842 | 841 | 447 | 394 | 841 | 0 | |
| 5 | | ಪುತ್ತೂರು | 8589 | 8498 | 7433 | 1028 | 8461 | 37 | |
| 6 | | ಸುಳ್ಯ | 5191 | 5134 | 4100 | 981 | 5081 | 53 | |
| 7 | | ಕಡಬ | 4292 | 4164 | 3501 | 608 | 4109 | 55 | |
| 8 | | ಬಂಟ್ವಾಳ | 9738 | 9639 | 8184 | 1434 | 9618 | 21 | |
| 9 | | ಬೆಳ್ತಂಗಡಿ | 14202 | 13849 | 10414 | 3055 | 13469 | 380 | |
| **ದಕ್ಷಿಣ ಕನ್ನಡ ಒಟ್ಟು** | | | **47718** | **46965** | **36779** | **9640** | **46419** | **546** | |
| 10 | ಉಡುಪಿ | ಉಡುಪಿ | 490 | 490 | 418 | 72 | 490 | 0 | |
| 11 | | ಬ್ರಹ್ಮಾವರ | 3316 | 3284 | 2200 | 1054 | 3254 | 30 | |
| 12 | | ಕಾಪು | 2807 | 2770 | 1934 | 780 | 2714 | 56 | |
| 13 | | ಕಾರ್ಕಳ | 4113 | 4072 | 2669 | 1247 | 3916 | 156 | |
| 14 | | ಹೆಬ್ರಿ | 1920 | 1916 | 1195 | 620 | 1815 | 101 | |
| 15 | | ಕುಂದಾಪುರ | 7443 | 7240 | 6317 | 839 | 7156 | 84 | |
| 16 | | ಬೈಂದೂರು | 3434 | 3321 | 2902 | 410 | 3312 | 9 | |
| **ಉಡುಪಿ ವೃತ್ತ ಒಟ್ಟು** | | | **23523** | **23093** | **17635** | **5022** | **22657** | **436** | |

**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಮಂಜುನಾಥ್ ಭಂಡಾರಿ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 462ಕ್ಕೆ ಅನುಬಂಧ-2**

**ಗಂಗಾ ಕಲ್ಯಾಣ ಯೋಜನೆಯಡಿ ನೀರಾವರಿ ಪಂಪುಸೆಟ್ಟುಗಳ ವಿದ್ಯುದ್ದೀಕರಣ**

| ಕ್ರ. ಸಂ. | ತಾಲ್ಲೂಕು | 2021-22 | | 2022-23 | | 2023-24 (ಜನವರಿ-24ರ ಅಂತ್ಯಕ್ಕೆ) | | | ಬಾಕಿ ಇರಲು ಕಾರಣ | | | | |
|---|---|---|---|---|---|---|---|---|---|---|---|---|---|
| | | ಬಂದಿರುವ ಅರ್ಜಿಗಳು | ವಿದ್ಯುತ್ ಸಂಪರ್ಕ ಕಲ್ಪಿಸಲಾದ ನೀರಾವರಿ ಪಂಪುಸೆಟ್ಟುಗಳು | ಬಂದಿರುವ ಅರ್ಜಿಗಳು | ವಿದ್ಯುತ್ ಸಂಪರ್ಕ ಕಲ್ಪಿಸಲಾದ ನೀರಾವರಿ ಪಂಪುಸೆಟ್ಟುಗಳು | ಬಂದಿರುವ ಅರ್ಜಿಗಳು | ವಿದ್ಯುತ್ ಸಂಪರ್ಕ ಕಲ್ಪಿಸಲಾದ ನೀರಾವರಿ ಪಂಪುಸೆಟ್ಟುಗಳು | ಬಾಕಿ ಇರುವ ಅರ್ಜಿಗಳು | ಕಾಮಗಾರಿ ಪ್ರಗತಿಯಲ್ಲಿರುವ ಅರ್ಜಗಳು | ಕಾಮಗಾರಿ ಕೈಗೆತ್ತಿಕೊಳ್ಳಬೇಕಾ ಗಿರುವ ಅರ್ಜಿಗಳು | ಇತರೇ | ಕಾಮಗಾರಿ ಪೂರ್ಣಗೊಂಡು ಸಂಪರ್ಕ ಪಡೆಯಬೇಕಾದ ಅರ್ಜಿಗಳು | ಕಂಪನಿ ನಿಯಮ ಪಾಲಿಸಬೇಕಾದ ಅರ್ಜಿಗಳು |
| 1 | ಮೂಡಬಿದ್ರೆ | 44 | 42 | 24 | 19 | 28 | 25 | 3 | 1 | 1 | 0 | 1 | 0 |
| 2 | ಮಂಗಳೂರು | 43 | 35 | 24 | 19 | 26 | 11 | 15 | 6 | 2 | 0 | 0 | 7 |
| 3 | ಉಳ್ಳಾಲ | | | 3 | 0 | 13 | 4 | 9 | 1 | 1 | 0 | 1 | 6 |
| 4 | ಮುಲ್ಕಿ | | | 0 | 0 | 1 | 1 | 0 | 0 | 0 | 0 | 0 | 0 |
| 5 | ಪುತ್ತೂರು | 72 | 59 | 71 | 45 | 37 | 37 | 0 | 0 | 0 | 0 | 0 | 0 |
| 6 | ಸುಳ್ಯ | 43 | 31 | 26 | 26 | 9 | 8 | 1 | 1 | 0 | 0 | 0 | 0 |
| 7 | ಕಡಬ | 25 | 17 | 17 | 16 | 15 | 11 | 4 | 2 | 1 | 0 | 1 | 0 |
| 8 | ಬಂಟ್ವಾಳ | 153 | 108 | 124 | 86 | 84 | 58 | 26 | 7 | 12 | 0 | 7 | 0 |
| 9 | ಬೆಳ್ತಂಗಡಿ | 96 | 57 | 90 | 88 | 28 | 19 | 9 | 0 | 5 | 0 | 4 | 0 |
| **ದಕ್ಷಿಣ ಕನ್ನಡ** | | **476** | **349** | **379** | **299** | **241** | **174** | **67** | **18** | **22** | **0** | **14** | **13** |
| 10 | ಉಡುಪಿ | 20 | 13 | 31 | 26 | 16 | 11 | 5 | 0 | 0 | 3 | 1 | 1 |
| 11 | ಕಾಪು | 6 | 6 | 6 | 5 | 6 | 2 | 4 | 0 | 0 | 0 | 4 | |
| 12 | ಬ್ರಹ್ಮಾವರ | 27 | 20 | 48 | 34 | 23 | 16 | 7 | 0 | 0 | 0 | 2 | 5 |
| 13 | ಕಾರ್ಕಳ | 41 | 29 | 32 | 32 | 16 | 12 | 4 | 0 | 0 | 4 | 0 | 0 |
| 14 | ಹೆಬ್ರಿ | 20 | 15 | 30 | 24 | 15 | 13 | 2 | 1 | 0 | 1 | 0 | 0 |
| 15 | ಕುಂದಾಪುರ | 27 | 19 | 60 | 54 | 18 | 18 | 0 | 0 | 0 | 0 | 0 | 0 |
| 16 | ಬೈಂದೂರು | 36 | 31 | 47 | 28 | 36 | 34 | 2 | 0 | 1 | 0 | 0 | 1 |
| **ಉಡುಪಿ** | | **177** | **133** | **254** | **203** | **130** | **106** | **24** | **1** | **1** | **8** | **7** | **7** |

**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಮಂಜುನಾಥ್ ಭಂಡಾರಿ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 462ಕ್ಕೆ ಅನುಬಂಧ-3**

| ಕ್ರ. ಸಂ | ತಾಲ್ಲೂಕು | ಪರಿಶಿಷ್ಟ ಜಾತಿ ಉಪಯೋಜನೆಯಡಿ ನೀರಾವರಿ ಪಂಪುಸೆಟ್ಟುಗಳ ವಿದ್ಯುದ್ದೀಕರಣ | | | | | | ಗಿರಿಜನ ಉಪಯೋಜನೆಯಡಿ ನೀರಾವರಿ ಪಂಪುಸೆಟ್ಟುಗಳ ವಿದ್ಯುದ್ದೀಕರಣ | | | | | |
|---|---|---|---|---|---|---|---|---|---|---|---|---|---|
| | | 2021–22 | | 2022–23 | | 2023–24 (ಜನವರಿ-24ರ ಅಂತ್ಯಕ್ಕೆ) | | 2021–22 | | 2022–23 | | 2023–24(ಜನವರಿ-24ರ ಅಂತ್ಯಕ್ಕೆ) | |
| | | ಬಂದಿರುವ ಅರ್ಜಿಗಳು | ವಿದ್ಯುತ್ ಸಂಪರ್ಕ ಕಲ್ಪಿಸಲಾದ ನೀರಾವರಿ ಪಂಪುಸೆಟ್ಟುಗಳು | ಬಂದಿರುವ ಅರ್ಜಿಗಳು | ವಿದ್ಯುತ್ ಸಂಪರ್ಕ ಕಲ್ಪಿಸಲಾದ ನೀರಾವರಿ ಪಂಪುಸೆಟ್ಟುಗಳು | ಬಂದಿರುವ ಅರ್ಜಿಗಳು | ವಿದ್ಯುತ್ ಸಂಪರ್ಕ ಕಲ್ಪಿಸಲಾದ ನೀರಾವರಿ ಪಂಪುಸೆಟ್ಟುಗಳು | ಬಂದಿರುವ ಅರ್ಜಿಗಳು | ವಿದ್ಯುತ್ ಸಂಪರ್ಕ ಕಲ್ಪಿಸಲಾದ ನೀರಾವರಿ ಪಂಪುಸೆಟ್ಟುಗಳು | ಬಂದಿರುವ ಅರ್ಜಿಗಳು | ವಿದ್ಯುತ್ ಸಂಪರ್ಕ ಕಲ್ಪಿಸಲಾದ ನೀರಾವರಿ ಪಂಪುಸೆಟ್ಟುಗಳು | ಬಂದಿರುವ ಅರ್ಜಿಗಳು | ವಿದ್ಯುತ್ ಸಂಪರ್ಕ ಕಲ್ಪಿಸಲಾದ ನೀರಾವರಿ ಪಂಪುಸೆಟ್ಟುಗಳು |
| 1 | ಮೂಡಬಿದ್ರೆ | 0 | 0 | 0 | 0 | 0 | 0 | 0 | 0 | 0 | 0 | 0 | 0 |
| 2 | ಮಂಗಳೂರು | 0 | 0 | 0 | 0 | 0 | 0 | 0 | 0 | 0 | 0 | 0 | 0 |
| 3 | ಉಳ್ಳಾಲ | 0 | 0 | 0 | 0 | 0 | | 0 | 0 | 0 | 0 | 0 | |
| 4 | ಮುಲ್ಕಿ | 0 | 0 | 0 | 0 | 0 | 0 | 0 | 0 | 0 | 0 | 0 | 0 |
| 5 | ಪುತ್ತೂರು | 1 | 1 | 0 | 0 | 0 | 0 | 0 | 0 | 0 | 0 | 0 | 0 |
| 6 | ಸುಳ್ಯ | 1 | 1 | 0 | 0 | 0 | 0 | 1 | 1 | 0 | 0 | 0 | 0 |
| 7 | ಕಡಬ | 0 | 0 | 0 | 0 | 0 | 0 | 0 | 0 | 0 | 0 | 0 | 0 |
| 8 | ಬಂಟ್ವಾಳ | 0 | 0 | 0 | 0 | 0 | 0 | 0 | 0 | 0 | 0 | 0 | 0 |
| 9 | ಬೆಳ್ತಂಗಡಿ | 0 | 0 | 0 | 0 | 0 | 0 | 0 | 0 | 0 | 0 | 0 | 0 |
| **ದಕ್ಷಿಣ ಕನ್ನಡ** | | **2** | **2** | **0** | **0** | **0** | **0** | **1** | **1** | **0** | **0** | **0** | **0** |
| 10 | ಉಡುಪಿ | 0 | 0 | 0 | 0 | 0 | 0 | 0 | 0 | 0 | 0 | 0 | 0 |
| 11 | ಕಾಪು | 0 | 0 | 0 | 0 | 0 | 0 | 0 | 0 | 0 | 0 | 0 | 0 |
| 12 | ಬ್ರಹ್ಮಾವರ | 0 | 0 | 0 | 0 | 0 | 0 | 2 | 2 | 0 | 0 | 0 | 0 |
| 13 | ಕಾರ್ಕಳ | 1 | 1 | 0 | 0 | 0 | 0 | 0 | 0 | 0 | 0 | 0 | 0 |
| 14 | ಹೆಬ್ರಿ | 0 | 0 | 0 | 0 | 0 | 0 | 0 | 0 | 0 | 0 | 0 | 0 |
| 15 | ಕುಂದಾಪುರ | 1 | 1 | 0 | 0 | 0 | 0 | 9 | 9 | 11 | 11 | 0 | 0 |
| 16 | ಬೈಂದೂರು | 0 | 0 | 0 | 0 | 0 | 0 | 2 | 2 | 14 | 14 | 9 | 9 |
| **ಉಡುಪಿ** | | **2** | **2** | **0** | **0** | **0** | **0** | **13** | **13** | **25** | **25** | **9** | **9** |

## ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಮಂಜುನಾಥ್ ಭಂಡಾರಿ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 462ಕ್ಕೆ ಅನುಬಂಧ-4: -

**ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ ಮತ್ತು ಹೊರ ಗುತ್ತಿಗೆದಾರರಿಗೆ ಪಾವತಿಸಲಾಗುತ್ತಿರುವ ಮೊಬಲಗಿನ ವಿವರಗಳು :-**

| ಕಂಪನಿ | 2020-21 | | 2021-22 | | 2022-23 | | 01.04.2023 ರಿಂದ 31-12-2023 | |
|---|---|---|---|---|---|---|---|---|
| | ಹೊರ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ | ಹೊರ ಗುತ್ತಿಗೆದಾರರಿಗೆ ಪಾವತಿಸಲಾದ ಒಟ್ಟು ಮೊತ್ತ (ರೂ. ಲಕ್ಷಗಳಲ್ಲಿ) | ಹೊರ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ | ಹೊರ ಗುತ್ತಿಗೆದಾರರಿಗೆ ಪಾವತಿಸಲಾದ ಒಟ್ಟು ಮೊತ್ತ (ರೂ. ಲಕ್ಷಗಳಲ್ಲಿ) | ಹೊರ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ | ಹೊರ ಗುತ್ತಿಗೆದಾರರಿಗೆ ಪಾವತಿಸಲಾದ ಒಟ್ಟು ಮೊತ್ತ (ರೂ. ಲಕ್ಷಗಳಲ್ಲಿ) | ಹೊರ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ | ಹೊರ ಗುತ್ತಿಗೆದಾರರಿಗೆ ಪಾವತಿಸಲಾದ ಒಟ್ಟು ಮೊತ್ತ (ರೂ. ಲಕ್ಷಗಳಲ್ಲಿ) |
| ಬೆಸ್ಕಾಂ | 3,538 | 13,411.70 | 4,993 | 16,018.42 | 5,951 | 17,542.99 | 6,069 | 10,270.01 |
| ಮೆಸ್ಕಾಂ | 1,046 | 2,375.71 | 1,118 | 2,520.18 | 1,112 | 2,572.99 | 1,163 | 2,866.39 |
| ಸೆಸ್ಕ್ | 723 | 243.63 | 751 | 367.66 | 753 | 409.03 | 756 | 658.87 |
| ಹೆಸ್ಕಾಂ | 2,976 | 5,072.02 | 3,045 | 5,245.07 | 3,057 | 5,735.33 | 3,014 | 6,064.12 |
| ಜೆಸ್ಕಾಂ | 179 | 390.82 | 179 | 430.84 | 209 | 518.37 | 209 | 443.69 |
| **ಒಟ್ಟು** | **8,462** | **21,493.88** | **10,086** | **24,582.17** | **11,082** | **26,778.71** | **11,211** | **20,303.08** |

***